ಓ.ಎಸ್. ನಂಃ 546/2022
ಡಿ.ಡಬ್ಲ್ಯೂ-1 (ರಾಮಪ್ಪ)

ದಿನಾಂಕ: 12-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಶ್ರೀ.ಎನ್.ಎಸ್.ಜಿ. ವಾದಿ ಪರ ವಕೀಲರಿಂದಃ**

33. ವಾದಿಗೆ ನಾವು ಬರೆದುಕೊಟ್ಟ ಖರೀದಿ ಕರಾರ ಪತ್ರದಲ್ಲಿ ವಾದಿಯ ಆಧಾರ ಕಾರ್ಡ ಮತ್ತು ಮೋಬೈಲ ನಂಬರ ನಮೂದು ಇದೆ ಎಂದರೆ ಸರಿ. ನಿಪಿ-1 ರಲ್ಲಿರುವ ವಾದಿಯ ಆಧಾರ ಕಾರ್ಡ ನಂಬರ ಮತ್ತು ಮೋಬೈಲ ನಂಬರ ಉಪಯೋಗಿಸಿ ನಿಡಿ-10 ರಲ್ಲಿ ವಾದಿಗೆ ಗೊತ್ತಾಗದ ಹಾಗೆ ನಮೂದಿಸಿದ್ದೇವೆ ಎಂದರೆ ಸರಿಯಲ್ಲ.

34. ದಿಃ 13/12/2021 ರಂದು ವಾದಿ ನಮಗೆ ಆಗದವರ ಮಾತು ಕೇಳಿ ಖರೀದಿ ಕರಾರು ರದ್ದತಿ ಪತ್ರಕ್ಕೆ ಸಹಿ ಮಾಡಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-10 ಯಾವತ್ತೂ ವಾದಿ ನಮಗೆ ಮಾಡಿಕೊಟ್ಟಿಲ್ಲ, ವಾದಿಗೆ ಗೊತ್ತಾಗದ ಹಾಗೆ ನಾವು ಸದರಿ ದಾಖಲೆಯನ್ನು ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ವಾದಿ ನಿಡಿ-10ಕ್ಕೆ ಸಹಿ ಮಾಡದೇ ಓಡಿ ಹೋಗಿದ್ದರ ವಿಚಾರವಾಗಿ ವಾದಿಯ ಮೇಲೆ ನಾವು ಯಾವುದೇ ಕಾನೂನುರ ಕ್ರಮ ಕೈಕೊಂಡಿಲ್ಲ. ಅದೇ ರೀತಿ ನಮ್ಮ ವಕೀಲರಿಂದ ವಾದಿಗೆ ನಾವು ದುಡ್ಡು ಮರಳಿ ಕೊಟ್ಟಿದ್ದರೂ ಸಹ ಖರೀದಿ ಕರಾರು ರದ್ದತಿ ಪತ್ರ ಬರೆದುಕೊಟ್ಟಿಲ್ಲ ಎಂದು ಹೇಳಿ ನಾವು ವಾದಿಗೆ ಯಾವುದೇ ನೊಟೀಸು ಕೊಟ್ಟಿಲ್ಲ. ನಾವು ವಾದಿಗೆ ನಿಪಿ-1 ರಂತೆ ಬರೆದುಕೊಟ್ಟ ಖರೀದಿ ಕರಾರ ಪತ್ರದ ಆಧಾರದ ಮೇಲೆ ಖರೀದಿ ಪತ್ರ

ಬರೆದುಕೊಡುವುದನ್ನು ತಪ್ಪಿಸುವ ಉದ್ದೇಶದಿಂದ ಹಾಗೂ ವಾದಿಯ ದುಡ್ಡು ಮುಳುಗಿಸುವ ಉದ್ದೇಶದಿಂದ ನಿಡಿ-10ನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

35. ವಾದಿ ನಿಪಿ-1ರ ಪ್ರಕಾರ ಬಾಕಿ ಉಳಿದ ರೂ.1,00,000/- ನಮಗೆ ಕೊಟ್ಟು ಖರೀದಿ ಪತ್ರ ಬರೆಯಿಸಿಕೊಳ್ಳಲು ಯಾವತ್ತೂ ತಯಾರ ಇದ್ದರು ಎಂದರೆ ಸಾಕ್ಷಿದಾರರು ತಾವು ವಾದಿಗೆ ಜಮೀನು ಖರೀದಿಗೆ ಕೊಟ್ಟಿಲ್ಲ ಎಂದು ಹೇಳುತ್ತಾರೆ. ನಿಪಿ-1 ರಂತೆ ವಾದಿಗೆ ನಾವು ಖರೀದಿ ಕರಾರ ಪತ್ರ ಬರೆದುಕೊಟ್ಟಿದ್ದರೂ ಸಹ ಯಾವುದೇ ಖರೀದಿ ಕರಾರ ಪತ್ರ ಬರೆದುಕೊಟ್ಟಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1ರ ಪ್ರಕಾರ ನಾವು ಖರೀದಿ ಪತ್ರ ಬರೆದುಕೊಡದೇ ಇದ್ದುದ್ದರಿಂದ ವಾದಿ ಈ ದಾವೆ ಮಾಡಿದ್ದಾರೆ ಎಂದರೆ ಸಾಕ್ಷಿದಾರರು ವಾದಿ ಈ ಖೊಟ್ಟಿ ದಾವೆ ಮಾಡಿದ್ದಾರೆ ಎಂದು ಹೇಳುತ್ತಾರೆ.

36. ಖರೀದಿ ಕರಾರ ಪತ್ರ ಬರೆದುಕೊಡುವಾಗ ಸರ್ವೆ ನಂ.50 ರ ಒಟ್ಟು ಕ್ಷೇತ್ರ 19ಎಕರೆ ಇತ್ತು ಎಂದರೆ ಸರಿ. ಸದರಿ ಸರ್ವೆ ನಂ.50 ರಲ್ಲಿ ಫೋಡಿಯಾಗಿ ಸರ್ವೆ ನಂ.50/4 ರಲ್ಲಿ ನಮ್ಮ ಹಿಸ್ಸೆಗೆ 04ಎಕರೆ ಜಮೀನಿನ ಪ್ರತ್ಯೇಕ ಪಹಣಿ ಪತ್ರಿಕೆ ಇದೆ ಎಂದರೆ ಸರಿ. ವಾದಿಯ 02ಎಕರೆ ಜಮೀನು ನಮ್ಮ ಜಮೀನಿಗೆ ಹೊಂದಿಕೊಂಡಿದ್ದರಿಂದ ವಾದಿ ನಮ್ಮ ಜೊತೆ ಖರೀದಿ ವ್ಯವಹಾರ ಮಾಡಿದ್ದಾರೆ ಎಂದರೆ ಸರಿಯಲ್ಲ.

37. ಸದರಿ ಖರೀದಿ ವ್ಯವಹಾರದ ವಿಚಾರವಾಗಿ ನಾವು ವಾದಿಯಿಂದ ರೂ.15,00,000/- ಪಡೆದು ಖರೀದಿ ಕರಾರ ಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ರೂ.8,50,000/- ವಾದಿಯಿಂದ ಪಡೆದಿದ್ದು ಬಾಕಿ ಮೊತ್ತ ಬಡ್ಡಿ ಹಚ್ಚಿದ್ದಾಗಿ ಹೇಳುತ್ತಾರೆ. ನಿಪಿ-1 ಖರೀದಿ ಕರಾರ ಪತ್ರದಲ್ಲಿ ರೂ.8,50,000/- ಅಸಲು ಹಾಗೂ ಬಾಕಿ ಉಳಿದ ಮೊತ್ತ ಬಡ್ಡಿ ಎಂದು ಬರೆದಿದ್ದಾರೆ ಎಂದು ಹೇಳುತ್ತಾರೆ. ವಾದಿಯಿಂದ ಮುಂಗಡವಾಗಿ ಪಡೆದ ರೂ.15,00,000/- ನಾವು ನಮ್ಮ ಮನೆತನದ ಅಡಚಣೆಗಾಗಿ ಬಳಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ವಾದಿ ಯಾವತ್ತೂ ನನಗೆ ಬಡ್ಡಿಯ ಮೇಲೆ ದುಡ್ಡು ಕೊಟ್ಟಿಲ್ಲ, ನಿಪಿ-1 ಬಡ್ಡಿ ವ್ಯವಹಾರಕ್ಕೆ ಸಂಬಂಧಪಟ್ಟಿಲ್ಲ, ನಾವು ದಾವಾ ಆಸ್ತಿಯನ್ನು ಮಾರಾಟ ಮಾಡುವ ಉದ್ದೇಶದಿಂದ ನಿಪಿ-1ನ್ನು ವಾದಿಗೆ ಬರೆದಕೊಟ್ಟಿದ್ದೇವೆ ಎಂದರೆ ಸರಿಯಲ್ಲ.

38. ನಿಪಿ-1ರ ಪ್ರಕಾರ ವಾದಿಗೆ ಖರೀದಿ ಪತ್ರ ಬರೆದುಕೊಡದೇ ನಷ್ಟ ಉಂಟು ಮಾಡಿದ್ದೇವೆ ಎಂದರೆ ಸರಿಯಲ್ಲ. ವಾದಿ ದಾವಾ ಆಸ್ತಿಯ ಖರೀದಿ ಮೊತ್ತದ ಪೈಕಿ ರೂ.15,00,000/- ನಮಗೆ ಕೊಡದೆ ಬೇರೆ ಕಡೆ ಹೊಲ ತೆಗೆದುಕೊಂಡಿದ್ದಲ್ಲಿ ವಾದಿಗೆ ಲಾಭ ಆಗುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ನಮ್ಮ ಸಹೋದರಿಯರಿಂದ ಓ.ಎಸ್.ನಂ.190/2023 ಹಾಗೂ ಓ.ಎಸ್.ನಂ.197/2023 ಸುಳ್ಳು ದಾವೆಗಳನ್ನು ಮಾಡಿಸಿದ್ದೇವೆ ಎಂದರೆ ಸರಿಯಲ್ಲ.

39. ಉದಗಟ್ಟಿ ಗ್ರಾಮದಲ್ಲಿ ನೀರಾವರಿ ಇಲಾಖೆಯಿಂದ ಮಾಡಿದ ಕಾಲುವೆಗಳು ಮುಚ್ಚಿ ಹೋಗಿವೆ ಎಂದರೆ ಸಾಕ್ಷಿದಾರರು ಬೇಕಾದವರು ಇಟ್ಟುಕೊಂಡಿದ್ದಾರೆ ಬೇಡಾದವರು ಮುಚ್ಚಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಉದಗಟ್ಟಿ ಗ್ರಾಮದಲ್ಲಿ ನೀರಾವರಿ ಇಲಾಖೆಯಿಂದ ಮಾಡಿದ ಕಾಲುವೆಗಳು ಮುಚ್ಚಿ ಹೋಗಿದ್ದರಿಂದ ನೀರಾವರಿ ಸೌಲಭ್ಯ ಇರುವುದಿಲ್ಲ ಎಂದರೆ ಸರಿಯಲ್ಲ.

40. ನಿಡಿ-8ರ ಫೋಟೋದಲ್ಲಿ ಕಾಣುತ್ತಿರುವ ಕಬ್ಬಿನ ಬೆಳೆ ಇನ್ನು ಚಿಕ್ಕದಿದೆ ಎಂದರೆ ಸಾಕ್ಷಿದಾರರು ಅದು ಕಟಾವಿಗೆ ಬಂದಿದೆ ಎಂದು ಹೇಳುತ್ತಾರೆ. ನಿಡಿ-8ರ ಪ್ರಕಾರ ಕಬ್ಬಿನ ಬೆಳೆ ನನ್ನ ಎತ್ತರಕಿಂತ ಚಿಕ್ಕದಿದೆ ಎಂದರೆ ಸರಿಯಲ್ಲ. ನಿಡಿ-8 ರಲ್ಲಿಯ 3 ಮತ್ತು 4ನೇ ಫೋಟೋಗಳಲ್ಲಿ ಕಾಣುತ್ತಿರುವ ಕಬ್ಬು ನನಗಿಂತ ಎತ್ತರ ಇದೆ ಎಂದರೆ ಸಾಕ್ಷಿದಾರರು ತಮಗೆ ಸಮಾನವಾಗಿ ಇದೆ ಎಂದು ಹೇಳುತ್ತಾರೆ. ನಿಪಿ-8ರಲ್ಲಿ ಸರ್ವೆ ನಂಬರ ನಮೂದು ಇಲ್ಲ ಎಂದರೆ ಸರಿ. ನಿಪಿ-8ರಡಿ ಹಾಜರಪಡಿಸಿದ ಫೋಟೋಗಳು ದಾವಾ ಆಸ್ತಿಯಲ್ಲಿಯ ಕಬ್ಬಿನ ಬೆಳೆಗೆ ಸಂಬಂಧಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಫೋಟೋ ಬೇರೆ ಜಮೀನಿಗೆ ಸಂಬಂಧಪಟ್ಟಿರುತ್ತವೆ ಎಂದರೆ ಸರಿಯಲ್ಲ.

41. ನಮ್ಮ ಲಿಖಿತ ಹೇಳಿಕೆಯ ಖಂಡಿಕೆ-10ಎ ನಲ್ಲಿ ಸರ್ವೆ ನಂ.115/8 ರ ಜಮೀನನ್ನು ದಿಃ 24/02/1998 ರಂದು ರೂ.1,00,000/- ಭೀಮಗೌಡ, ಸದಾಶಿವ, ರುದ್ರಗೌಡ ತಂದೆ ಮುತ್ತೆಪ್ಪಗೌಡ ಪಾಟಿಲ ಇವರಿಗೆ ಮಾರಾಟ ಮಾಡಿರುತ್ತೇವೆ ಎಂದು ಬರೆಯಿಸಿರುತ್ತೇವೆ ಎಂದರೆ ಸರಿ. ನಿಡಿ-17 ಸಹ ದಿನಾಂಕ

24/02/1998 ರ ಖರೀದಿ ವ್ಯವಹಾರಕ್ಕೆ ಸಂಬಂಧಪಟ್ಟಿರುತ್ತದೆ ಎಂದರೆ ಸರಿ. ಸದರಿ ಜಮೀನು ಮಾರಾಟ ಮಾಡಿದ 2-3 ವರ್ಷದ ನಂತರ ದಾವಾ ಆಸ್ತಿಯನ್ನು ಖರೀದಿ ಮಾಡಿದ್ದೇವೆ.

42. ನಿಡಿ-18ರ ಪ್ರಕಾರ ದಿಃ02/12/1997 ರಂದು ದಾವಾ ಜಮೀನನ್ನು ಖರೀದಿ ಮಾಡಲಾದೆ ಎಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ. ನಿಡಿ-18 ಹಾಜರಪಡಿಸುವುದಕ್ಕಿಂತ ಪೂರ್ವದಲ್ಲಿ ಅದರಲ್ಲಿ ಬರೆದ ವಿಷಯಗಳನ್ನು ನಾವು ಓದಿ ಅಥವಾ ಓದಿಸಿ ತಿಳಿದುಕೊಂಡಿಲ್ಲ. ಸರ್ವೆ ನಂ.115/8 ಮಾರಾಟ ಮಾಡುವುದಕ್ಕಿಂತ ಮೊದಲೆ ದಾವಾ ಜಮೀನು ಖರೀದಿ ಮಾಡಿದ್ದೇವೆ ಎಂದರೆ ಸರಿಯಲ್ಲ. ವಾದಿಗೆ ನಷ್ಠ ಉಂಟು ಮಾಡುವ ಉದ್ದೇಶದಿಂದ ಸರ್ವೆ ನಂ.115/8 ಮಾರಾಟ ಮಾಡಿ ಬಂದ ಹಣದಿಂದ ದಾವಾ ಜಮೀನು ಖರೀದಿ ಮಾಡಿದ್ದೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

43. ಈ ಎಲ್ಲ ವಿಷಯಗಳ ಬಗ್ಗೆ ನನಗೆ ಮಾಹಿತಿ ಇದ್ದರೂ ಸಹ ವಾದಿಗೆ ನಷ್ಠ ಉಂಟು ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1ರ ಪ್ರಕಾರ ವಾದಿಗೆ ಖರೀದಿ ಪತ್ರ ಬರೆದುಕೊಡುವುದನ್ನು ತಪ್ಪಿಸುವುದಕ್ಕಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ಲಿಖಿತ ಹೇಳಿಕೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಷಯಗಳೆಲ್ಲವೂ ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ